# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 286 |
| ಸದಸ್ಯರ ಹೆಸರು | : | ಶ್ರೀ ಟಿ.ಎ ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 06.12.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯಾಧ್ಯಾಂತ ಅಕ್ರಮವಾಗಿ ಕಂದಾಯ ಭೂಮಿ ಪರಭಾರೆ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು: ಎಷ್ಟು ಎಕರೆ ಭೂಮಿ ಪರಭಾರೆ ಮಾಡಲಾಗಿದೆ (ಸರ್ವೇ ನಂಬರ್‌ವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ತುಮಕೂರು ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.<br><br>ತುಮಕೂರು ಜಿಲ್ಲೆಯ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.<br><br><table><tr><th>ಕ್ರ.ಸ.</th><th>ತಾಲ್ಲೂಕು</th><th>ಗ್ರಾಮ</th><th>ಸ.ನಂ.</th><th>ವಿಸ್ತೀರ್ಣ ಎ-ಗು</th></tr><tr><td>1</td><td rowspan="3">ಗುಬ್ಬಿ</td><td>ದೊಡ್ಡಗುಣಿ</td><td>95</td><td>20.35</td></tr><tr><td>2</td><td>ಚನ್ನಶೆಟ್ಟಿಹಳ್ಳಿ</td><td>6</td><td>2.09</td></tr><tr><td>3</td><td>ಚನ್ನಶೆಟ್ಟಿಹಳ್ಳಿ</td><td>23</td><td>0.28</td></tr></table></td></tr>
<tr><td>ಆ)</td><td>ಸದರಿ ಪ್ರಕರಣದಲ್ಲಿ ಎಷ್ಟು ಜನರಿಗೆ ಖಾತೆ ಮಾಡಿಕೊಡಲಾಗಿದೆ: ಹಾಗೂ ಈ ಪ್ರಕರಣಗಳಲ್ಲಿ ಎಷ್ಟು ಅಧಿಕಾರಿಗಳು ಭಾಗಿಯಾಗಿದ್ದಾರೆ ಅವರುಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು: (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)</td><td>ಸದರಿ ಪ್ರಕರಣದಲ್ಲಿ ನಿಟ್ಟೂರು ಹೋಬಳಿ, ದೊಡ್ಡಗುಣಿ ಸ.ನಂ.95 ರಲ್ಲಿ 11 ಜನರಿಗೆ ಖಾತೆ ಬದಲಾವಣೆ ಮಾಡಲಾಗಿದೆ. ಕಸಬಾ ಹೋಬಳಿ, ಚನ್ನಶೆಟ್ಟಿಹಳ್ಳಿ ಗ್ರಾಮದ ಸ.ನಂ.6 ರಲ್ಲಿ 11 ಜನರಿಗೆ ಖಾತೆ ಮಾಡಿಕೊಡಲಾಗಿದೆ ಹಾಗೂ ಚನ್ನಶೆಟ್ಟಿಹಳ್ಳಿ ಗ್ರಾಮದ ಸ.ನಂ.23 ರಲ್ಲಿ ಮಾಡಿಕೊಡಲಾಗಿದೆ. 4 ಜನರಿಗೆ ಖಾತೆ ಮಾಡಿಕೊಡಲಾಗಿದೆ ಈ ಪ್ರಕರಣದಲ್ಲಿ 07 ಜನ ನೌಕರರು ಭಾಗಿಯಾಗಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ<br><br><table><tr><th>ಕ್ರ. ಸಂ</th><th>ಅಧಿಕಾರಿ/ನೌಕರರ ಹೆಸರು</th><th>ಹುದ್ದೆ</th></tr><tr><td>1</td><td>ಕೆ.ವಿ.ನಾರಾಯಣ್</td><td>ರಾಜಸ್ವ ನಿರೀಕ್ಷಕರು</td></tr><tr><td>2</td><td>ವಿವೇಕ್</td><td>ದ್ವಿತಿಯ ದರ್ಜೆ ಸಹಾಯಕರು</td></tr><tr><td>3</td><td>ರವೀಶ್</td><td>ಶಿರಸ್ತೇದಾರ್</td></tr><tr><td>4</td><td>ಪುನೀತ್</td><td>ಗ್ರಾಮ ಆಡಳಿತ ಅಧಿಕಾರಿ</td></tr><tr><td>5</td><td>ಪ್ರಕಾಶ್</td><td>ಪ್ರಥಮ ದರ್ಜೆ ಸಹಾಯಕರು</td></tr><tr><td>6</td><td>ಜಗದೀಶ್</td><td>ಗ್ರಾಮ ಆಡಳಿತ ಅಧಿಕಾರಿ</td></tr><tr><td>7</td><td>ರಾಜೇಶ್</td><td>ಗ್ರಾಮ ಸಹಾಯಕರು</td></tr></table><br>ಸದರಿ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.</td></tr>
<tr><td>ಇ)</td><td>ಈ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)</td><td>ಗುಬ್ಬಿ ತಾಲ್ಲೂಕಿನ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ನೌಕರರ ವಿರುದ್ಧ ಸಂಬಂಧಪಟ್ಟ ಪೋಲೀಸ್ ಠಾಣೆಯಲ್ಲಿ FIR No:157/2022 ಮತ್ತು FIR No.277/2022 ರಂತೆ ಪ್ರಕರಣ ದಾಖಲಾಗಿ ನ್ಯಾಯಾಂಗ ಬಂಧನವಾಗಿದ್ದು, CID ವಿಚಾರಣೆ ಮತ್ತು ಇಲಾಖೆ ವಿಚಾರಣೆ ಬಾಕಿ ಇರುತ್ತದೆ. ಸದರಿ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಈವರೆಗೆ ಎಷ್ಟು ಎಕರೆ ಅಕ್ರಮವಾಗಿ ಪರಭಾರೆ ಮಾಡಿದ ಭೂಮಿಯನ್ನು ಸರ್ಕಾರ ಮರು ವಶಕ್ಕೆ ಪಡೆಯಲಾಗಿದೆ: ವಶಪಡಿಸಿಕೊಂಡ ಭೂಮಿಯನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಕ್ರಮವಾಗಿ ಪರಭಾರೆ ಮಾಡಿದ ಜಮೀನನ್ನು ಸರ್ಕಾರದ ಮರುವಶಕ್ಕೆ ಪಡೆಯಲಾಗಿದೆ. ವಶಪಡಿಕೊಂಡ ಭೂಮಿಯನ್ನು ಚನ್ನಶೆಟ್ಟಿಹಳ್ಳಿ ಗ್ರಾಮದ ಸ.ನಂ.6 ರಲ್ಲಿ ಪೋಲೀಸ್ ಇಲಾಖೆಗೆ, ಕಂದಾಯ ಇಲಾಖೆಗೆ ಹಾಗೂ ಸಾರ್ವಜನಿಕ ಸ್ಮಶಾನದ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ಸದರಿ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಉ) | ಅಕ್ರಮವಾಗಿ ಕಂದಾಯ ಭೂಮಿ ಪರಭಾರೆ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಕಂದಾಯ ಇಲಾಖೆಯ ಜಮೀನು ಅಕ್ರಮವಾಗಿ ಪರಭಾರೆ ಪ್ರಕರಣಗಳು ಮರುಕಳಿಸದಂತೆ ಕ್ರಮವಹಿಸುವ ಕುರಿತು ಭೂ ಮಂಜೂರಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಕಾಯ್ದೆಯ ಕಲಂ 94, 94-ಎ4 ಹಾಗೂ 94-ಬಿ ಅಡಿ ಕೈಗೊಳ್ಳುವ ಭೂ ಮಂಜೂರಾತಿ ಪೂರ್ಣ ಪ್ರಕ್ರಿಯೆಯನ್ನು ಗಣಕೀಕರಣಗೊಳಿಸಲಾಗಿರುತ್ತದೆ.<br><br>ಕಂದಾಯ ಇಲಾಖೆಯ ಜಮೀನು ಅಕ್ರಮವಾಗಿ ಪರಭಾರೆ ಪ್ರಕರಣಗಳ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಕಲಂ 192 (ಎ) ರಡಿಯಲ್ಲಿ ಕ್ರಮವಹಿಸಲು ಕಾಯ್ದೆಯಲ್ಲಿ ಅವಕಾಶವಿರುತ್ತದೆ. |

ಸಂಖ್ಯೆ: ಆರ್‌ಡಿ 126 ಎಲ್‌ಜಿಕ್ಯೂ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು